**OS: 107/2015**
**D.W-1**

## ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ

ದಿನಾಂಕಃ 19.06.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

### ಪಾಟೀ ಸವಾಲು ವಾದಿಗಳ ಪರ ವಕೀಲರಿಂದ

ನನಗೆ ಕನ್ನಡ ಓದಲು ಬರುವುದಿಲ್ಲ. 1983 ರಲ್ಲಿ ನಾನು ಹುಟ್ಟಿರುತ್ತೇನೆ ಎಂದರೆ ಸರಿ. ಕೂಡ್ಲಿಗಿ ಸರ್ಕಾರಿ ಆಸ್ಪತ್ರೆ ಎದುರುಗಡೆ ನನ್ನ ಪೆಟ್ಟಿಗೆ ಅಂಗಡಿ ಇದೆ ಎಂದರೆ ಸರಿ. ಬೆಳಿಗ್ಗೆ 8-00 ರಿಂದ ರಾತ್ರಿ 10-00 ಗಂಟೆಯವರೆಗೆ ಸದರಿ ಶಾಪ್ ನಲ್ಲಿ ನಾನು ವ್ಯಾಪಾರ ಮಾಡುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ವ್ಯಾಪಾರ ಮಾಡುತ್ತೇನೆಂದು ಬರೆಸಿಲ್ಲ ಎಂದರೆ ಸರಿ. ನನ್ನ ತಂದೆಗೆ 5 ಜನ ಮಕ್ಕಳು ಇರುತ್ತೇವೆ. ನಾನು ಮತ್ತು ನನ್ನ ತಮ್ಮ ಉಮೇಶ ಅಕ್ಕ-ಪಕ್ಕ ಮನೆಯಲ್ಲಿ ಇದ್ದೇವೆ. ನನ್ನ ಹೆಸರಿನಲ್ಲಿ 2 ಎಕರೆ 68 ಸೆಂಟ್ಸ್ ಜಮೀನು ಇದೆ. ನನ್ನ ತಮ್ಮನ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ. ಈ ಆಸ್ತಿಯಲ್ಲೇ ಆತನಿಗೆ ಭಾಗ ಇದೆ. ನೊಂದಾಯಿತವಲ್ಲ 20 ರೂ ಬಾಂಡ್ ಪೇಪರ್ ನಲ್ಲಿ ಪಾಲುವಿಭಾಗ ಪತ್ರವನ್ನು ವಾದಿ 1 ಮತ್ತು 2 ರವರು ಬರೆದುಕೊಟ್ಟಿರುತ್ತಾರೆ. ಆ ಕಾಲಕ್ಕೆ ನನ್ನ ತಂದೆ ಜೀವಂತ ಇರಲಿಲ್ಲ. ಆ ಪತ್ರವನ್ನು ಬರೆದುಕೊಟ್ಟ ಕಾಲಕ್ಕೆ ನನ್ನ ತಮ್ಮ ಇದ್ದರು. ಆ ಪಾಲುವಿಭಾಗ ಪತ್ರದಲ್ಲಿ ನನ್ನ ತಮ್ಮನಿಗೆ ಭಾಗ ಇದೆ ಎಂದು ಬರೆದಿರುವುದಿಲ್ಲ.

ನನ್ನ ತಂದೆಗೆ ಒಟ್ಟು 8 ಜನ ಸಹೋದರ-ಸಹೋದರಿಯರು ಇರುತ್ತಾರೆ. ಅವರುಗಳೆಂದರೆ ಬಸಪ್ಪ, ಸಿದ್ದಬಸಪ್ಪ, ದೊಡ್ಡ ಸಿದ್ದಪ್ಪ, ಸಣ್ಣ ಸಿದ್ದಪ್ಪ, ಶಿವನಾಗಪ್ಪ, ಶಾಂತವೀರಮ್ಮ, ಸಣ್ಣ ಕರಿಬಸಮ್ಮ ಮತ್ತು ದೊಡ್ಡ ಕರಿಬಸಮ್ಮ. ನನ್ನ ತಾತ ಕುರುಬರ ಕೊಟ್ರಪ್ಪರವರ ಹೆಸರಿನಲ್ಲಿ 15 ಎಕರೆ ಜಮೀನು ಇರಬಹುದು. ಆ ಜಮೀನುಗಳ ಸರ್ವೆ ನಂಬರ್ ನನಗೆ ನೆನಪಿಲ್ಲ. ಮೂರು ಸರ್ವೆ ನಂಬರ್ ಆಸ್ತಿಗಳು ಇವೆ. ಗುಡೆಕೋಟೆ ರಸ್ತೆಯಲ್ಲಿ 10 ಎಕರೆಗಿಂತ ಹೆಚ್ಚು ಆಸ್ತಿ ಇದೆ. ಆ ಆಸ್ತಿಯಲ್ಲಿ ನಮಗೆ 2 ಎಕರೆ 68 ಸೆಂಟ್ಸ್ ಭಾಗ ಬಂದಿದೆ. ಎ.ಡಿ ಗುಡ್ಡದ ರಸ್ತೆಯಲ್ಲಿ 5-6 ಎಕರೆ ಜಮೀನು ಇರಬಹುದು. ಸದರಿ ಆಸ್ತಿ ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪನ ಹೆಸರಿನಲ್ಲಿದೆ. ಅವರ ಹೆಸರು ನಾಗರಾಜಪ್ಪ  ಮತ್ತು ಬಸಪ್ಪನ ಮಗ ನಾಗರಾಜ. ನನ್ನ ತಕರಾರುನಲ್ಲಿ ನನಗೆ ಪಿತ್ರಾರ್ಜಿತ ಆಸ್ತಿವಿದ್ದು ಅವುಗಳನ್ನು ಇದುವರೆಗೆ ಭಾಗಯಾಗಿಲ್ಲ ಎಂದು ಬರೆಸಿದ್ದಿರೆ ಎಂದರೆ ಸರಿ. ಎ.ಡಿ ಗುಡ್ಡದ  ಆಸ್ತಿ ಶಿವನಾಗಪ್ಪನವರಿಗೆ ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ನಾಗರಾಜಪ್ಪರವರಿಗೆ ಸದರಿ ಜಮೀನು ಹೇಗೆ ಹೋಗಿದೆ ಎಂದು ನನಗೆ ಗೊತ್ತಿಲ್ಲ.

**OS: 107/2015**
**D.W-1**

ಸರ್ವೆ ನಂಃ 750 ಬಿ, ವಿಸ್ತೀರ್ಣ 4 ಎಕರೆ 41 ಸೆಂಟ್ಸ್ ಆಸ್ತಿ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ನನ್ನ ಮತ್ತು ನನ್ನ ತಮ್ಮ ಉಮೇಶ್ ರವರ ಮನೆಗಳು ಇವೆ ಎಂದರೆ ಸರಿ.

ಸರ್ವೆ ನಂಃ 757 ಎ, ವಿಸ್ತೀರ್ಣ 1 ಎಕರೆ 47 ಸೆಂಟ್ಸ್ ಆಸ್ತಿ ನಮ್ಮ ಕುಟುಂಬದ ಆಸ್ತಿ ಎಂದರೆ ಸರಿ. ಸರ್ವೆ ನಂಃ 757 ಸಿ, ವಿಸ್ತೀರ್ಣ 5 ಎಕರೆ 48 ಸೆಂಟ್ಸ್ ಆಸ್ತಿ ನಮ್ಮ ಕುಟುಂಬದ ಆಸ್ತಿ ಎಂದರೆ ಸರಿ. ಸರ್ವೆ ನಂಃ 750 ಬಿ, ವಿಸ್ತೀರ್ಣ 4 ಎಕರೆ 41 ಸೆಂಟ್ಸ್ ಆಸ್ತಿ ಮೂಲತಃ ಕುರುಬರ ಕೊಟ್ರಪ್ಪರವರ ಆಸ್ತಿ ಎಂದರೆ ಸರಿ. ಸದರಿ ಆಸ್ತಿಗಳನ್ನು ನನ್ನ ತಂದೆ ಸಣ್ಣ ಸಿದ್ದಪ್ಪ, ನನ್ನ ದೊಡ್ಡಪ್ಪ ದೊಡ್ಡ ಸಿದ್ದಪ್ಪ ಗಂಟಿ ತಿಪ್ಪೇಸ್ವಾಮಿ ಮತ್ತು ನಬಿ ಸಾಬ್ ರವರಿಗೆ 25-30 ವರ್ಷಗಳ ಹಿಂದೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಒಟ್ಟಿಗೆ ಇದ್ದಾಗ ನನ್ನ ದೊಡ್ಡಪ್ಪ ಬಸಪ್ಪರವರು ಮಾರಾಟ ಮಾಡಿರುತ್ತಾರೆ, ಅವರ ಸಹೋದರರು ತಕರಾರು ಮಾಡಿರುವುದಿಲ್ಲ.

ನನ್ನ ತಂದೆಯ ಅಣ್ಣ-ತಮ್ಮಂದಿರು ವಿಭಾಗ ಮಾಡಿಕೊಂಡ ಬಗ್ಗೆ ನನಗೆ ನೆನಪಿಲ್ಲ. ನನ್ನ ತಂದೆ ಅಣ್ಣ-ತಮ್ಮಂದಿರಿಗೆ ಯಾರು-ಯಾರಿಗೆ ಎಷ್ಟು-ಎಷ್ಟು ಭಾಗ ಬಂದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾತ ಕುರುಬರ ಕೊಟ್ರಪ್ಪರವರಿಂದ ಯಾವುದೇ ಆಸ್ತಿಗಳು ಬಂದಿರುವುದಿಲ್ಲ. ಶಿವನಾಗಪ್ಪರವರ ಹೆಸರಿಗೆ ಆಸ್ತಿ ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಶಿವನಾಗಪ್ಪರವರು ಮತ್ತು ನಾವು 15-20 ವರ್ಷಗಳಿಂದ ಬೇರೆ-ಬೇರೆಯಾಗಿದ್ದೇವೆ.

ಸರ್ವೆ ನಂಃ 750 ಬಿ, ವಿಸ್ತೀರ್ಣ 4 ಎಕರೆ 41 ಸೆಂಟ್ಸ್ ಆಸ್ತಿ ನನ್ನ ತಂದೆಯ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನನ್ನ ತಂದೆ ನಬಿ ಸಾಬ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನನ್ನ ದೊಡ್ಡಪ್ಪ ಬಸಪ್ಪರವರು ಮಾರಾಟ ಮಾಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

ವಾದಿ 1 ಮತ್ತು 2 ರವರ ಮದುವೆ ಯಾವಾಗ ಆಗಿದೆ ಎಂಬುದು ನನಗೆ ಗೊತ್ತಿಲ್ಲ. ಸದರಿಯವರ ಮದುವೆ 1965 ರಲ್ಲಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ವಾದಿಯ ತವರು ಮನೆ ಸೋವೇನಹಳ್ಳಿ ಎಂದರೆ ಸರಿ. ಅವರ ತಂದೆಯ ಹೆಸರು ಬೊಮ್ಮಪ್ಪ ಎಂದರೆ ಸರಿ. ಅವರಿಗೆ ಗಂಡು ಸಂತಾನ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಒಬ್ಬ ಮಗ ಇದ್ದ ತೀರಿಕೊಂಡಿರುತ್ತಾನೆ. ಆತ ಮದುವೆಯಾಗುವ ಮುಂಚೆ ಮೃತಪಟ್ಟಿರುತ್ತಾನೆ. ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ. 1 ನೇ ವಾದಿಯ ತಂದೆಯು 2 ನೇ ವಾದಿಯನ್ನು ತನ್ನ ಮನೆಯಲ್ಲಿ ಮನೆ ಅಳಿಯನಾಗಿ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. 1 ನೇ ವಾದಿಯ ತಂದೆ ಮೃತಪಡುವವರೆಗೂ ಅವರ ಜೊತೆಯಲ್ಲಿಯೇ ಮನೆ ಅಳಿಯನಾಗಿ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. 1 ನೇ ವಾದಿಯ ತಂದೆ 1970 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ವಾದಿಯ ತಂದೆ ಮೃತಪಟ್ಟ ನಂತರ ಎಲ್ಲಾ

ಆಸ್ತಿಗಳು ಅವರ ಒಬ್ಬಳೇ ಮಗಳಾದ 1ನೇ ವಾದಿಯ ಹೆಸರಿಗೆ ಬಂದಿವೆ ಎಂದರೆ ಸರಿಯಲ್ಲ. ಸರ್ವೆ ನಂಃ 429ಎ, ವಿಸ್ತೀರ್ಣ 1 ಎಕರೆ 55 ಸೆಂಟ್ಸ್, ಸರ್ವೆ ನಂಃ 364ಎ, ವಿಸ್ತೀರ್ಣ 1 ಎಕರೆ 15 ಸೆಂಟ್ಸ್ ಜಮೀನುಗಳು 1ನೇ ವಾದಿಯ ಹೆಸರಿನಲ್ಲಿ ಇದ್ದವು ಎಂದರೆ ನನಗೆ ಗೊತ್ತಿಲ್ಲ. ದಿಃ 04.04.1975 ರಲ್ಲಿ ಸದರಿ ಆಸ್ತಿಗಳನ್ನು 1ನೇ ವಾದಿಯು ಸಣ್ಣ ಬಸಪ್ಪ ತಂದೆ ಸುಬ್ಬಯ್ಯರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ವಾದಿಗೆ ಒಂದು ಮನೆಯು ಸಹ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ಮಾರಾಟ ಮಾಡಿ ಅದರಿಂದ ಬಂದ ಪ್ರತಿಫಲದ ಹಣದಿಂದ ದಾವಾ ಆಸ್ತಿಯನ್ನು ದಿಃ 07.04.1975 ರಂದು ಯುವರಾಜ್ ಸಿಂಗ್ ರವರಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಹಾಗಾಗಿ 1ನೇ ವಾದಿಯ ಹೆಸರಿಗೆ ನೊಂದಣಿಯಾಗಿದೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**